


# ಸ್ಲೇಟು ಇಲ್ಲ, ಬಳಪ ಇಲ್ಲ; ಸ್ಮಾರ್ಟ್‌ಫೋನೇ ಎಲ್ಲ...

**ಕೊರೊನಾ ನೆಪದಲ್ಲಿ ಮಕ್ಕಳಲ್ಲಿ ಓದು ಬರೆಯುವ ಅಭ್ಯಾಸ ಕಡಿಮೆಯಾಗಿದೆ. ಮನೆಯೇ ಶಾಲೆ ಆಗಿರುವುದರಿಂದ ಸ್ಲೇಟು–ಬಳಪ, ಪೆನ್ಸಿಲ್–ಪೆನ್ ಹಿಡಿಯುವ ಕೈಗಳಲ್ಲಿ ಸ್ಮಾರ್ಟ್‌ಫೋನ್ ಬಂದಿದೆ. ಭಾಷಾ ತರಗತಿಗಳ ಬಗ್ಗೆ ಶೈಕ್ಷಣಿಕ ವಲಯದಲ್ಲಿ ಮೊದಲೇ ನಿರ್ಲಕ್ಷ್ಯವಿದೆ. ಪ್ರಸಕ್ತ ಡಿಜಿಟಲ್ ಪ್ರಭಾವಳಿಯಲ್ಲಿ ಮಕ್ಕಳು ಭಾಷೆಯ ಸೊಗಡಿನಿಂದ ಇನ್ನಷ್ಟು ವಂಚಿತರಾಗುತ್ತಾರೆ.**

■ ಸುಮವೀಣಾ

ಮಗುವಿಗೆ ಅಕ್ಷರಭ್ಯಾಸ ಮಾಡಿಸುವುದೆಂದರೆ, ಆ ದಿನ ನಿಗದಿ ಮಾಡುವುದೆಂದರೆ ಅಪ್ಪ ಅಮ್ಮಂದಿರಿಗೆ, ಅಜ್ಜಿ ತಾತಂದಿರಿಗೆ ಎಲ್ಲಿಲ್ಲದ ಸಂಭ್ರಮ. ಆ ವಿಶೇಷ ಆಸ್ಥೆ ಈಗಿಲ್ಲ! ಅಂದಿನ ಸಂಭ್ರಮ ಈಗ ಕೇವಲ ಸಾಂಕೇತಿಕ ಆಚರಣೆಯಾಗಿದೆ. ಆಧುನಿಕ ತಂತ್ರಜ್ಞಾನದ ಜಾಲಕ್ಕೆ ಸಿಕ್ಕಿರುವ ನಾವು ನಮ್ಮ ಮಕ್ಕಳಿಗೆ ಸರಿಯಾಗಿ ಅಕ್ಷರಾಭ್ಯಾಸ ಮಾಡಿಸುತ್ತಿಲ್ಲ. ಕೆಲ ಮಕ್ಕಳಿಗೆ ಸ್ಲೇಟು ಬಳಪಗಳ ಪರಿಚಯವೇ ಇಲ್ಲ.

ಸ್ಮಾರ್ಟ್‌ಫೋನ್‌ಗಳಲ್ಲಿ ಅಳವಡಿಸಿಕೊಂಡಿರುವ ಆ್ಯಪ್‌ಗಳ ಮೂಲಕ ಅಕ್ಷರ ತಿದ್ದಿಸುತ್ತಿದ್ದೇವೆ. ಹಿಂದಿನ ಅಧ್ಯಾಪಕರು ಕಾಗುಣಿತ ಹೇಳಿಕೊಡುವಾಗ ಇಳಿ, ಗುಣಿಸು, ದೀರ್ಘ ಮುಂತಾದವನ್ನು ಮಕ್ಕಳಿಗೆ ಮನದಟ್ಟು ಮಾಡುತ್ತಿದ್ದರು. ಈಗ ಕೇವಲ ಕ, ಕಾ, ಕಿ, ಕೀ ಎಂದು ಹೇಳಿಕೊಡುತ್ತಿದ್ದೇವೆ. ಇದು ತಪ್ಪುಕ್ರಮ. ಹಾಗಾಗಿ ಮಕ್ಕಳ ಬರವಣಿಗೆಯ ಸಾಮರ್ಥ್ಯಕ್ಕೆ ನಾವೇ ಮೊದಲ ವಿಘ್ನ. ಎಷ್ಟೋ ಮಕ್ಕಳಿಗೆ ‘ಕಾಗುಣಿತ’ ಎಂದು ಉಚ್ಚರಿಸಲೂ ಇಂದು ಬರುತ್ತಿಲ್ಲ, ‘ಕಾಕುಣಿತ’ ಎಂದು ಹೇಳುತ್ತಿವೆ. ಕಾಪಿ ಬರೆಸುವಾಗ ಹಿಂದೆ ಮೊದಲ ಸಾಲನ್ನು ಅಧ್ಯಾಪಕರು ಬರೆದರೆ ಆ ಹಾಳೆಯ ಕಡೆಯ ಸಾಲಿನಿಂದ ಕಾಪಿ ಬರೆಯಬೇಕಾಗಿತ್ತು. ಹಾಗಾಗಿ ತಪ್ಪುಗಳಾಗುತ್ತಿರಲಿಲ್ಲ.

ಈಗೆಲ್ಲಾ ಕಾಪಿ ಪುಸ್ತಕದ ಮೇಲೆ ಮೊದಲೇ ಅಚ್ಚಾಗಿರುತ್ತದೆ. ಮೇಲಿನ ಸಾಲನ್ನು ನೋಡಿ ಕೆಳಸಾಲನ್ನು ಬರೆಯುವುದು ಕಣ್ತಪ್ಪು, ಕೈತಪ್ಪು ಆದಲ್ಲಿ ಆ ಹಾಳೆಯ ತುಂಬೆಲ್ಲಾ ತಪ್ಪುಗಳು ಪುನರಾವರ್ತನೆಗೊಳ್ಳುತ್ತವೆ. ಉದಾಹರಣೆಗೆ, ಶಕುಂತಲೆ ಬರೆಯುವಾಗ

